73207 MA-779

Sl.No. Total No. of Pages : 3

# ಮೂರನೆಯ ಚತುರ್ಮಾಸ ಬಿ.ಕಾಂ./ಬಿ.ಬಿ.ಎ./ಬಿ.ಟಿ.ಎಚ್.
# ಪರೀಕ್ಷೆ, ಮಾರ್ಚ್/ಏಪ್ರಿಲ್ 2022
# (ಚತುರ್ಮಾಸ ಸ್ಕೀಮ್ : ಸಿಬಿಸಿಎಸ್)
# (2019–20 ರಿಂದ 2020–21 ರ ವರೆಗಿನ ವಿದ್ಯಾರ್ಥಿಗಳಿಗೆ)
# ಕನ್ನಡ ಭಾಷೆ (ಪತ್ರಿಕೆ–೩)
# ಕಾವ್ಯಭಾಗ–೧ ಮತ್ತು ಕಥನ ಭಾಗ

ಸಮಯ: 3 ಗಂಟೆಗಳು ಗರಿಷ್ಠ ಅಂಕಗಳು : 80

## ಕಾವ್ಯ ಭಾಗ–೧ (50 ಅಂಕಗಳು)

ಪ್ರ1) ಅ) ಒಂದು ಪದ್ಯಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ: [5]

೧) ತೌರೂರ ದಾರಿಯಲಿ ಮುಳ್ಳಿಲ್ಲ ಕಲ್ಲಿಲ್ಲ
ಸಾಸಿವೆಯಷ್ಟು ಮರಳಿಲ್ಲ ದಾರಿಯಲಿ
ಬಿಸಿಲಿನ ಬೇಗೆ ಸುಡಲಿಲ್ಲ

೨) ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ
ಗುಹೇಶ್ವರಾ ನಿಮಗಾಗಿ ಸತ್ತವರ ನಾರನೂ ಕಾಣೆ.

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: [5×1=5]

೧) ಜೇಡರ ದಾಸಿಮಯ್ಯನ ಅಂಕಿತನಾಮವೇನು?

೨) ಹರಿಶ್ಚಂದ್ರನನ್ನು ಪರೀಕ್ಷೆ ಮಾಡಿದ ಮುನಿ ಯಾರು?

೩) ಮಾದೇವಿಯ ಮದುವೆಯಾದ ದೊರೆಯ ಹೆಸರೇನು?

೪) 'ಜೈಮಿನಿ ಭಾರತ'ದ ಕರ್ತೃ ಯಾರು?

೫) ಸಂಚಿಯ ಹೊನ್ನಮ್ಮನ ಕೃತಿಯ ಹೆಸರೇನು?

*P.T.O.*

https://www.uomonline.com

ಪ್ರ2) ಮೂರು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ: [3×4=12]

೧) ನಾ ಹೆಚ್ಚೊ ನಿನ್ನ ತವರ್ಹೆಚ್ಚೊ

೨) ಇರುಳೆಲ್ಲ ನಡೆದನಾ ಸುಂಕಕಂಜಿ

೩) ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ.

೪) ಪರಿಮಳನಾರಿಕ್ಕಿದರು ಕರ್ಪುರಕೆ

೫) ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ.

ಪ್ರ3) ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: [2×2=4]

೧) ನಕ್ಷತ್ರಿಕ

೨) ಮಯೂರಧ್ವಜ

೩) ಅಲ್ಲಮಪ್ರಭು

೪) ಕೌಶಿಕ

ಆ) ಒಂದು ವಿಷಯವನ್ನು ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ. [4]

೧) ಲಿಂಗ ಸಮಾನತೆಯನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿ?

೨) 'ಸತ್ಯಮೇವ ಜಯತೆ' ಈ ಹೇಳಿಕೆಯನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ. [10]

೧) ತಾಯಿ, ತವರು, ತಾಯ್ತನದ ಸಂಬಂಧವನ್ನು ಜನಪದ ತ್ರಿಪದಿಯ ಹಿನ್ನಲೆಯಲ್ಲಿ ವಿವರಿಸಿ.

೨) ವಿಶ್ವಾಮಿತ್ರ ಮುನಿ ಒಡ್ಡಿದ ಪರೀಕ್ಷೆಗೆದ್ದ ರಾಜ ಹರಿಶ್ಚಂದ್ರನು ಸತ್ಯ ಹರಿಶ್ಚಂದ್ರನಾದ ಬಗೆಯನ್ನು ವಿವರಿಸಿ.

ಪ್ರ5) ಎರಡು ಪ್ರಶ್ನೆಗಳಿಗೆ ಉತ್ತರಿಸಿ: [2×5=10]

೧) ದಾಸಿಮಯ್ಯನ ವಚನಗಳಲ್ಲಿ ಭಕ್ತಿಯ ಪರಿಕಲ್ಪನೆಯನ್ನು ಚರ್ಚಿಸಿ.

೨) ಅಕ್ಕಮಹಾದೇವಿಯ ಘನ ವ್ಯಕ್ತಿತ್ವವನ್ನು ಪರಿಚಯಿಸಿ.

೩) ಮಯೂರ ಧ್ವಜನನ್ನು ಗೆಲ್ಲಲು, ಪರೀಕ್ಷಿಸಲು ಕೃಷ್ಣ ಹೂಡಿದ ಉಪಾಯವೇನು?

೪) ಸಂಚಿಯ ಹೊನ್ನಮ್ಮ ತಿಳಿಸಿದ ಹೆಣ್ಣಿನ ಮಹತ್ವವನ್ನು ವಿವರಿಸಿ.



https://www.uomonline.com

### ಕಥನ ಭಾಗ – (30 ಅಂಕಗಳು)

[10]

**ಪ್ರ6)** <u>ಒಂದು</u> ಪ್ರಶ್ನೆಗೆ ಉತ್ತರಿಸಿ:

೧) 'ಮಾನವ ಪ್ರಕೃತಿಯ ಕೂಸು' 'ಪ್ರಕೃತಿ ರಕ್ಷಣೆ ಅವನ ಹೊಣೆ' ಈ ಹೇಳಿಕೆಗಳನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

೨) 'ನಮ್ಮೂರ ಬೆಳದಿಂಗಳ ಕೆರೆಯಂತಹ ಬಾಲ್ಯದ ನೆನಪು' ಕಥನ ಭಾಗದ ಆಶಯವೇನು?

[10]

**ಪ್ರ7)** <u>ಒಂದು</u> ಪ್ರಶ್ನೆಗೆ ಉತ್ತರಿಸಿ.

೧) 'ಜಗವ ಸುತ್ತಿ ನಲಿ ಜನರ ನೋಡಿ ಕಲಿ' ಎಂಬುದನ್ನು ಡಾ.ಕೆ. ರಾಮಣ್ಣ ಹೇಗೆ ನಿರೂಪಿಸಿದ್ದಾರೆ? ತಿಳಿಸಿ.

೨) 'ಸೊಸೆಯರ ಸಂಸಾರ' ಪ್ರಬಂಧದಲ್ಲಿ ಅತ್ತೆ ಗಂಗಮ್ಮನಿಗೆ ಆದ ಅನುಭವವನ್ನು ಚಿತ್ರಿಸಿ.

[2×5=10]

**ಪ್ರ8)** <u>ಎರಡನ್ನು</u> ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ.

೧) 'ಇಕ್ಕಿಸ್ ಕಾ ಊಟ'ದ ಸ್ವಾರಸ್ಯವನ್ನು ಚರ್ಚಿಸಿ.

೨) ಪರಿಸರ ಸಂರಕ್ಷಣೆ ಮಹತ್ವ 'ಪಶ್ಚಿಮ ಘಟ್ಟಗಳ ಪತನ' ಲೇಖನದಲ್ಲಿ ಹೇಗೆ ವ್ಯಕ್ತವಾಗಿದೆ.

೩) ಲಂಡನ್ನಿನ ಭವ್ಯ ನೋಟದಲ್ಲಿ ಒಂದಾದ ಹೈಡ್ ಪಾರ್ಕ್‌ನ ಪರಿಚಯ ಮಾಡಿಕೊಡಿ.

೪) ಮನುಷ್ಯನಿಗೆ ಹಣದಿಂದ ನೆಮ್ಮದಿ ಸಿಗುವುದಿಲ್ಲ ಎಂಬುದು 'ಕುಣಿಯುವ ಕುರುಡು ಕಾಂಚಾಣ' ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.


https://www.uomonline.com